ಜಗದ ಹಸಿವಿಗೆ ಅನ್ನದ ಬಟ್ಟಲಾದ ಕಾರಟಗಿ

ಚಿಗುರೊಡೆದ 'ರೈಸ್ ಪಾರ್ಕ್ ಕನಸು': ಭತ್ತಕ್ಕೆ ಬೇಕಿದೆ ಪ್ರತ್ಯೇಕ ಮಂಡಳಿ

ವೀರೇಂದ್ರ ಪಾಟೀಲ ಕಾರಟಗಿ

ಜಗದ ಹಸಿವಿಗೆ ಕಾರಟಗಿಯ ಪ್ರಸಿದ್ಧ ಸೋನಾ ಮಸೂರಿ ಅಕ್ಕಿ ಅನ್ನದ ಬಟ್ಟಲು. ಇಂಥ ಅತ್ಯುತ್ತಮ ತಳಿಯ ಭತ್ತವನ್ನು ಅತ್ಯಧಿಕ ಪ್ರಮಾಣದಲ್ಲಿ ಬೆಳೆಯುವ 'ಕಣಜ'ದ ಮೇಲೆ ಇದೀಗ ಜಾಗತಿಕ ಕಂಪನಿಗಳ ಕಣ್ಣು. ಇಂಥ ಜಾಗತಿಕ ಪೈಪೋಟಿಯ ನಡುವೆ ಸ್ಥಳೀಯ ಸೊಗಡನ್ನು ಉಳಿಸಿಕೊಳ್ಳುವ ಜತೆಗೆ ಭತ್ತದ ಕೃಷಿ ಪರಂಪರೆಯ ರಕ್ಷಣೆಗೆ ಪ್ರತ್ಯೇಕ 'ಭತ್ತದ ಅಭಿವೃದ್ಧಿ ಮಂಡಳಿ' ಅಗತ್ಯ ಹಿಂದೆಂದಿಗಿಂತಲೂ ಈಗ ಜೋರಾಗಿದೆ.

ರಾಜ್ಯದ ನಾನಾ ಜಿಲ್ಲೆಗಳಲ್ಲಿ ನಾನಾ ತಳಿ ಭತ್ತ ಬೆಳೆಯಲಾಗುತ್ತಿದೆ. ಆದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ತುಂಗಭದ್ರ ಅಚ್ಚುಕಟ್ಟು ಪ್ರದೇಶ ಅತ್ಯುತ್ತಮ ಭತ್ತದ ತಳಿಗಳ ತೊಟ್ಟಿಲು. ಬಳ್ಳಾರಿ, ರಾಯಚೂರು, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ 8.95 ಲಕ್ಷ ಎಕರೆ ಪ್ರದೇಶದಲ್ಲಿ ಅತ್ಯುತ್ತಮ ತಳಿಯ ಸೋನಾ ಮಸೂರಿ ಸೇರಿದಂತೆ ಹಲವು ತಳಿಗಳ ಭತ್ತವನ್ನು ಬೆಳೆಯಲಾಗುತ್ತಿದೆ. ಇಲ್ಲಿ ಬೆಳೆದ ಭತ್ತ ಮತ್ತು ಅಕ್ಕಿ ರಾಜ್ಯ ಸೇರಿದಂತೆ ವಿದೇಶಗಳಿಗೂ ರಫ್ತಾಗುತ್ತದೆ.

ರಾಜ್ಯದಲ್ಲಿ ತೆಂಗು, ಕಾಫಿ, ಏಲಕ್ಕಿ ಕಲ್ಯಾಣ ಕರ್ನಾಟಕ ಭಾಗದ ತೊಗರಿ ಬೆಳೆಗೂ ಪ್ರತ್ಯೇಕ ಅಭಿವೃದ್ಧಿ ಮಂಡಳಿಗಳನ್ನು ರಚಿಸಲಾಗಿದೆ. ಆಹಾರದ ಅವಿಭಾಜ್ಯ ಅಂಗವಾದ ಭತ್ತಕ್ಕೆ ಮಾತ್ರ ಇಲ್ಲಿಯವರೆಗೂ ರಾಜ್ಯ ಕೇಂದ್ರ ಸರಕಾರಗಳು ಯಾವುದೇ ಮನ್ನಣೆ ನೀಡಿಲ್ಲ.

5



- ದೇಶದ ಭತ್ತ ಕೃಷಿ ಪ್ರದೇಶ ಸುಮಾರು 43.95 ಮಿಲಿಯನ್ ಹೆಕ್ಟೇರ್
- ಕರ್ನಾಟಕದಲ್ಲಿ ಭತ್ತ ಬೆಳೆಯುತ್ತಿರುವ ಪ್ರದೇಶ 1.29 ಮಿಲಿಯನ್ ಹೆಕ್ಟೇರ್
- ರಾಜ್ಯದಲ್ಲಿ ವಾರ್ಷಿಕ ಉತ್ಪಾದನೆಯಾಗುತ್ತಿರುವ ಭತ್ತ 36 ಮಿಲಿಯನ್ ಟನ್
- ರಾಜ್ಯದಲ್ಲಿ ಪ್ರತಿ ಹೆಕ್ಟೇರ್‌ಗೆ ಸರಾಸರಿ ಭತ್ತದ ಉತ್ಪಾದನೆ 2630 ಕೆಜಿ

ಜಾಗತಿಕ ಮನ್ನಣೆ

ಇಲ್ಲಿ ಸಂಸ್ಕರಣೆಯಾಗುವ ಕಾಟ್ಚುಲ ಅಕ್ಕಿ ಬಾಂಗ್ಲಾದೇಶ, ಶ್ರೀಲಂಕಾ, ಮಲೇಷ್ಯಾಕ್ಕೂ ಹೆಚ್ಚು ರಫ್ತಾಗುತ್ತದೆ. ಸೋನಾ ಮಸೂರಿ ಅಕ್ಕಿ ನಾನಾ ಕಂಪನಿಯ ಬ್ರಾಂಡ್‌ಗಳ ಮೂಲಕ ಅರಬ್ ರಾಷ್ಟ್ರಗಳು ಸೇರಿದಂತೆ ಅನೇಕ ದೇಶಗಳಿಗೆ ರಫ್ತಾಗುತ್ತದೆ. ಹಾಗಾಗಿ ಇಲ್ಲಿ ಬೆಳೆಯುವ ಭತ್ತ ಹಾಗೂ ಅಕ್ಕಿಗೆ ಜಾಗತಿಕ ಮನ್ನಣೆ (ಜಿಯೋಗ್ರಾಫಿಕಲ್ ಇಂಡಿಕೇಷನ್) ದೊರತಿದೆ.

ಪ್ರಗತಿಪಥ

2014ರ ಆ.14ರಂದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೈಸ್ ಪಾರ್ಕ್ ನಿರ್ಮಾಣಕ್ಕೆ ಕಂಕುಸ್ಥಾಪನೆ ನೆರವೇರಿಸಿದ ಬಳಿಕ 425 ಎಕರೆ ಪ್ರದೇಶದಲ್ಲಿ ಕಾಮಗಾರಿಗಳು ಭರದಿಂದ ಸಾಗಿವೆ. 6 ಸಾವಿರ ಮೆ. ಟನ್ ಸಾಮರ್ಥ್ಯದ 1 ಉಗ್ರಾಣ, 2 ಸಾವಿರ ಮೆ.ಟನ್ ಸಾಮರ್ಥ್ಯದ 1 ಉಗ್ರಾಣ, 100 ಟನ್ ಸಾಮರ್ಥ್ಯದ 2ನೇ ಬ್ರೀಜ್, ರಸ್ತೆಗಳು ನಿರ್ಮಾಣ ಮಾಡಲಾಗಿದೆ. ಇನ್ನು 2.30 ಕೋಟಿ ರೂ.ಗಳಲ್ಲಿ 315 ಎಕರೆ ಪ್ರದೇಶಕ್ಕೆ ಫೆನ್ಸಿಂಗ್ ಮಾಡಲಾಗಿದೆ.

29.09.2022
Vishwavani p.01

29.09.2022
Prajavani p.12

ಸೂರ್ಯಕಾಂತಿ ಎಣ್ಣೆ ಬೆಲೆ ಇಳಿಕೆ

ಮುಂಬೈ (ರಾಯಿಟರ್ಸ್): ಕಪ್ಪು ಸಮುದ್ರದ ಮಾರ್ಗವಾಗಿ ಉಕ್ರೇನ್ ಸೂರ್ಯಕಾಂತಿ ಎಣ್ಣೆಯ ರಫ್ತನ್ನು ಆಗಸ್ಟ್‌ನಿಂದ ಶುರು ಮಾಡಿರುವ ಪರಿಣಾಮವಾಗಿ ಈ ಅಡುಗೆ ಎಣ್ಣೆಯ ಬೆಲೆಯಲ್ಲಿ ಇಳಿಕೆ ಆಗಿದೆ.

ಏಪ್ರಿಲ್‌ನಲ್ಲಿ ಸೂರ್ಯಕಾಂತಿ ಎಣ್ಣೆಯ ಬೆಲೆ ಗರಿಷ್ಠ ಮಟ್ಟ ತಲುಪಿತ್ತು. ಆ ಮಟ್ಟಕ್ಕೆ ಹೋಲಿಸಿದರೆ ಈಗ ಬೆಲೆಯು ಸರಿಸುಮಾರು ಅರ್ಧದಷ್ಟು ಕಡಿಮೆ ಆಗಿದೆ.

'ಸೂರ್ಯಕಾಂತಿ ಎಣ್ಣೆಯನ್ನು ಸಾಧ್ಯವಾದಷ್ಟು ಬೇಗ ರಫ್ತು ಮಾಡಲು ಉಕ್ರೇನಿನ ಪೂರೈಕೆದಾರರು ಯತ್ನಿಸುತ್ತಿದ್ದಾರೆ. ಅಲ್ಲದೆ, ಸೂರ್ಯಕಾಂತಿ ಬೀಜದಿಂದ ಆಗಬೇಕಿರುವ ಎಣ್ಣೆ ಉತ್ಪಾದನೆ ದೊಡ್ಡ ಪ್ರಮಾಣದಲ್ಲಿ ಬಾಕಿ ಇದೆ' ಎಂದು ಮುಂಬೈ ಮೂಲದ ವರ್ತಕರೊಬ್ಬರು ತಿಳಿಸಿದ್ದಾರೆ.

29.09.2022
The Hindu p.14

'Tea exports rose to 116 mn kg in January-July this year'

Tea exports during the January-July period touched 116.36 million kg compared with 103.38 million kg a year earlier. According to Tea Board data, exports to the largest importing block, the CIS countries, remained almost stagnant at 25.20 million kg as against 24.98 million kg in the period. Industry sources said the conflict between Russia and Ukraine had caused serious shipment problems. UAE emerged as a large importer at 19.14 million kg, up from 8.07 million kg a year earlier. PTI

ಜಗದ ಹಸಿವಿಗೆ ಅನ್ನದ ಬಟ್ಟಲಾದ ಕಾರಟಗಿ

← ಮೊದಲಪುಟದಿಂದ

ಇನ್ನು ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯುವ ಸೋನಾ ಮಸೂರಿಗೆ ಜಾಗತಿಕ ಮನ್ನಣೆ ಇದೆ. ಹೀಗಿದ್ದರೂ ದಿನಕ್ಕೆ ಮೂರು ಬಾರಿ ಬಳಕೆಯಾಗುವ ಭತ್ತ-ಅಕ್ಕಿಗೆ ಅಭಾವ್ಯದ್ದಿ ಮಂಡಳ ರಚನೆಯಾಗಿಲ್ಲ.

ಭತ್ತ ಬೆಳೆದ ರೈತರಿಗೆ ಪ್ರತಿ ವರ್ಷ ಸೂಕ್ತ ಬೆಲೆ ಸಿಗದೇ ಸಂಕಷ್ಟದ ಸ್ಥಿತಿ ಅವರದ್ದು. ಕೆಲವೊಮ್ಮೆ ಅತಿವೃಷ್ಟಿ, ಅಕಾಲಿಕ ಮಳೆಗೂ ಭತ್ತದ ಬೆಳೆ ಹಾಳಾಗುವುದು ಸಾಮಾನ್ಯ. ಸಾವಿರಾರೂ ರು. ಸಾಲ ಮಾಡಿ ನಾಟಿ ಮಾಡಿ ಇಳುವರಿಯ ನಿರೀಕ್ಷೆಯಲ್ಲಿ ಇರುತ್ತಾರೆ. ಆದರೆ ಅಕಾಲಿಕ ಮಳೆ, ನೀರಿನ ಕೊರತೆ, ಬರುಗಾಳಿ ಆಲಿಕಲ್ಲು ಮಳೆ, ಬೆಂಕಿ ರೋಗ ಹರಡಿ ಬೆಳೆ ನಷ್ಟವಾಗುವುದು ಇಲ್ಲಿ ಮಾಮೂಲು. ಇಂಥ ಸ್ಥಿತಿಯಲ್ಲಿ ಮಂಡಳ ಇದ್ದರೆ ರೈತರಿಗೆ ನೆರವಾಗಬಹುದು ಎನ್ನುವ ಆಶಾಭಾವನೆ ಇಲ್ಲಿಯ ರೈತ ಸಮೂಹದ್ದು.

ಇದರ ಜತೆಗೆ ಬೆಳೆ ಬಂದಾಗ ಸೂಕ್ತ ಬೆಲೆ ದೊರೆಯುವುದಿಲ್ಲ. ವೈಜ್ಞಾನಿಕ ಬೆಂಬಲ ಬೆಲೆ, ಮುಕ್ತ ಮಾರುಕಟ್ಟೆ ಬೆಲೆಯ ಏರುಪೇರುದಿಂದಾಗಿ ರೈತರ ಪರಿಸ್ಥಿತಿ ಜೂಜಾಟವಾಡಿದಂತಾಗುತ್ತದೆ. ಇಂಥ ಸಮಯದಲ್ಲಿ ಮಂಡಳ ರಚನೆಯಿಂದ ಬೆಂಬಲ ಬೆಲೆ ನಿಗದಿ, ಏರಿಳಿತ ಮಾಡಲು ಸಾಧ್ಯವಾಗುತ್ತದೆ. ಈ ಎಲ್ಲ ಕಾರಣಕ್ಕೆ ಭತ್ತ ಅಭಿವೃದ್ಧಿ ಮಂಡಳ ರಚನೆಯ ಕೂಗು ಈಗ ಭತ್ತದ ಕಣಜದಲ್ಲಿ ಎದ್ದಿದೆ. ಅಡಳತ ನಡೆಸುವವರ ಇಚ್ಛಾಶಕ್ತಿಯ ಅವಶ್ಯಕತೆ ಇಲ್ಲಿಗೆ ಹೆಚ್ಚಿದೆ ಅಷ್ಟೇ.

ರೈಸ್ ಪಾರ್ಕ್ ಉದ್ದೇಶ ಈಡೇರೀತೇ?: ಸಹಜವಾಗಿಯೇ ಸೋನಾ ಮಸೂರಿ ಅಕ್ಕಿಗೆ ಎಲ್ಲಿಲ್ಲದ ಬೇಡಿಕೆ. ಹಾಗಾಗಿಯೇ ರಾಜ್ಯ ಸರಕಾರ ಕಾರಟಗಿ ಬಳಿ ರೈಸ್ ಟೆಕ್ನಾಲಜಿ ಪಾರ್ಕ್ ಮೂಲಕ ತಾಂತ್ರಿಕ ಸ್ಪರ್ಶ ನೀಡಲು ಮುಂದಾಗಿದೆ. ಸೆರಗು ನವಲಿ ಬಳಿ 425ಎಕರೆ ಪ್ರದೇಶದಲ್ಲಿ ಬೃಹತ್ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣವಾಗುತ್ತಿದೆ. ಆದರೆ ತುಂಗಭದ್ರಾ ಅಚ್ಚುಕಟ್ಟಿನ ವ್ಯಪ್ತಿಯ ಭತ್ತದ ಕೃಷಿಕರ ಸಮಸ್ಯೆಗಳು ಹತ್ತೆಂಟು ಇವೆ. ಈ ಭಾಗದ ಆರ್ಥಿಕ, ಔದ್ಯೋಗಿಕ ಸೇರಿದಂತೆ ನಾನಾ ಅಭಿವೃದ್ಧಿಗೆ ಮನ ಮಾಡಿದಲ್ಲಿ ಮಾತ್ರ ಈ ಪಾರ್ಕ್ ರಚನೆಗೆ ಅರ್ಥ ಬಂದೀತು.

ಪಟ್ಟಾ ಖಂಡದಲ್ಲೇ ಅತಿ ಹೆಚ್ಚು ಭತ್ತ ಬೆಳೆವ ಜತೆಗೆ ಅಕ್ಕಿ ಉತ್ಪಾದನೆ ಪ್ರದೇಶವೆಂದು ತುಂಗಭದ್ರಾ ಅಚ್ಚುಕಟ್ಟು ಖ್ಯಾತಿ ಹೊಂದಿದೆ. ಆದರೆ, ಉತ್ಪಾದನೆಯಾದ ಭತ್ತ ಸಂಸ್ಕರಿಸಲು ಸಮರ್ಪಕ ಕೈಗಾರಿಕೆಗಳ ಕೊರತೆಯಿಂದ ಬಹುತೇಕ ಭತ್ತ ನೆರೆಯ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಸೇರಿದಂತೆ ಇತರ ರಾಜ್ಯಗಳಿಗೆ ರವಾನೆಯಾಗುತ್ತಿದೆ. ಈ ಸಮಸ್ಯೆಯನ್ನು ನಿವಾರಿಸಬೇಕಿದೆ ರೈಸ್ ಟೆಕ್ನಾಲಜಿ ಪಾರ್ಕ್. ಇದರಿಂದ ಈ ಭಾಗದ ರೈತರು, ಅಕ್ಕಿ ಗಿರಣಿ ಮಾಲೀಕರು ಹಾಗೂ ವರ್ತಕರ ನಿರೀಕ್ಷೆ ಈಡೇರಬೇಕಿದೆ.

ರೈಸ್ ಪಾರ್ಕ್‌ನಲ್ಲಿ ಉತ್ಪನ್ನಗಳು: ರೈಸ್ ಪಾರ್ಕ್‌ನಲ್ಲಿ ಅಕ್ಕಿ ಮತ್ತು ಅಕ್ಕಿಯ ಉಪ ಉತ್ಪನ್ನಗಳಾದ ಅಕ್ಕಿ ಹಿಟ್ಟು, ಅಕ್ಕಿ ರವೆ, ಅಕ್ಕಿ ತೌಡು, ಎಣ್ಣೆ, ನ್ಯೂಡಲ್ಸ್, ಅಕ್ಕಿ ಆಧಾರಿತ ಪಾನೀಯಗಳು, ಪಶು ಮತ್ತು ಕುಕ್ಕುಟ ಆಹಾರವಲ್ಲದೆ ಭತ್ತದ ತೌಡಿನಿಂದ ವಿದ್ಯುತ್ ಉತ್ಪಾದನೆಯಾಗಲಿದೆ. ಅಲ್ಲದೇ, ಈ ಪರಿಸರದಲ್ಲಿ ಬೃಹತ್ ವಿವಿಧ ಬಗೆಯ ಅಕ್ಕಿ ಗಿರಣಿಗಳು, ವರ್ತಕರು, ದಾಸ್ತಾನು ಸಾಗಣಿಕೆ ಕಂಪನಿಗಳು, ಹ್ಯಾಂಡಿಂಗ್ ಸಂಸ್ಥೆಗಳು ತಲೆ ಎತ್ತಲಿವೆ. ಇದರಿಂದ ಸಾವಿರಾರು ಜನರಿಗೆ ಉದ್ಯೋಗ ದೊರಕಿಸುವ ಮೂಲಕ ಔದ್ಯೋಗಿಕ ಸಮಸ್ಯೆಯನ್ನು ನೀಗಿಸಲು ಸಹಕಾರಿಯಾಗುತ್ತದೆ.

ರಾಜಕೀಯ ಇಚ್ಛಾಶಕ್ತಿಗೆ ಒಲಿದ ಭಾಗ್ಯ

ಮಹತ್ವಕಾಂಕ್ಷಿ ರೈಸ್ ಟೆಕ್ನಾಲಜಿ ಪಾರ್ಕ್ ಯೋಜನೆ ಮಾಜಿಸಚಿವ ಶಿವರಾಜ ತಂಗಡಗಿಯ ಕನಸು. ರಾಜಕೀಯ ಇಚ್ಛಾಶಕ್ತಿಯಿಂದ ಈ ಭಾಗಕ್ಕೆ ಒಲಿದ ಭಾಗ್ಯ. ಈ ಯೋಜನೆ ಅನುಷ್ಠಾನಕ್ಕಾಗಿಯೇ ತಂಗಡಗಿಯವರು ಸರ್ಕಾರದ ಮೇಲೆ ಒತ್ತಡ ಹಾಕಿ ಕಾರಟಗಿಗೆ ಭತ್ತ ಮತ್ತು ಅಕ್ಕಿ ಉತ್ಪನ್ನಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಮಂಜೂರು ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ರಾಜ್ಯದ ಏಕೈಕ ವಿಶೇಷ ಎಪಿಎಂಸಿ ಮೂಲಕ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣಕ್ಕೆ ಮುಸ್ಸುಡಿ ಬರೆದರು. ಅಲ್ಲದೇ, ಜಾಗತೀಕ ಟೆಂಡರ್ ಕರೆಯುವ ಮೂಲಕ ದೇಶದ ಪ್ರಮುಖ ಉದ್ಯಮಿಗಳನ್ನು ಆಕರ್ಷಿಸಲು ಈ ಯೋಜನೆ ಸಿಂಗಾದಗೊಳ್ಳುತ್ತಿದೆ.

29.09.2022
Vishwavani p.05

ಭೂತಾನ್‌ನಿಂದ ಅಡಕೆ ಆಮದಿಗೆ ಅನುಮತಿ

ನವದೆಹಲಿ: ಭೂತಾನ್‌ನಿಂದ ಪ್ರತಿವರ್ಷ 17,000 ಟನ್ ತಾಜಾ (ಹಸಿ/ಹಸಿರು) ಅಡಕೆ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಬುಧವಾರ ಅನುಮತಿ ನೀಡಿದೆ. ಕನಿಷ್ಠ ಆಮದು ದರ (ಎಂಐಪಿ) ಷರತ್ತು ಇಲ್ಲದೆಯೇ ಆಮದಿಗೆ ಅವಕಾಶ ಕಲ್ಪಿಸಿದೆ. ದೇಶೀಯ ಅಡಕೆ ಬೆಳೆಗಾರರ ಹಿತ ಕಾಪಾಡುವ ಉದ್ದೇಶದಿಂದ 2017ರಲ್ಲಿ ಸರ್ಕಾರ ಪ್ರತಿ ಕೆ.ಜಿ. ಅಡಕೆಗೆ ₹251 ಎಂಐಪಿ ವಿಧಿಸಲಾಗಿತ್ತು. ◐ಪುಟ3 2B

ಕೇಂದ್ರ ಸರ್ಕಾರ ಒಟ್ಟು ಕೃಷಿ ಆಮದಿಗೆ ಅನುಮತಿ ನೀಡಿದೆಯೇ ಹೊರತು ಎಲ್ಲಿಯೂ ಅಡಕೆ ವಿಚಾರ ಪ್ರಸ್ತಾಪಿಸಿಲ್ಲ. ಯಾವುದೇ ಕಾರಣಕ್ಕೂ ಬೆಳೆಗಾರರಿಗೆ ಇದರಿಂದ ಸಮಸ್ಯೆ ಆಗುವುದಿಲ್ಲ, ಗಾಬರಿಪಡಬೇಕಿಲ್ಲ.

| ಕಿಶೋರ್‌ಕುಮಾರ್ ಕೊಡ್ಗಿ,
ಕ್ಯಾಂಪ್ಕೊ ಅಧ್ಯಕ್ಷ

29.09.2022
Vijaya Vani p.02A

ಮತ್ತೆ ಸೂರ್ಯಕಾಂತಿ ಎಣ್ಣೆ ರಫ್ತು

ಮುಂಬೈ: ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಯುಕ್ರೇನ್‌ನಿಂದ ಮತ್ತೆ ಸೂರ್ಯಕಾಂತಿ ಎಣ್ಣೆ ಮತ್ತೆ ರಫ್ತಾಗುತ್ತಿದೆ. ಹೀಗಾಗಿ ಈ ಎಣ್ಣೆಯ ಬೆಲೆ ಇಳಿಯುವ ಸಾಧ್ಯತೆ ಇದೆ.

ಜಗತ್ತಿನಲ್ಲಿ ಯುಕ್ರೇನ್ ಸೂರ್ಯಕಾಂತಿ ಎಣ್ಣೆಯ ಅತಿದೊಡ್ಡ ರಫ್ತುದಾರನಾಗಿದ್ದು ಭಾರತವೂ ಈ ದೇಶದಿಂದಲೇ ಗರಿಷ್ಠ ಪ್ರಮಾಣದ ಎಣ್ಣೆ ಆಮದು ಮಾಡಿಕೊಳ್ಳುತ್ತಿದೆ. ಕಳೆದ ಫೆಬ್ರವರಿಯಲ್ಲಿ ರಷ್ಯಾ ಆಕ್ರಮಣ ಮಾಡಿದ ನಂತರ ಯುಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆಯ ರಫ್ತು ಸ್ಥಗಿತಗೊಂಡಿತ್ತು. ಆದರೆ ಕಳೆದ ಆಗಸ್ಟ್‌ನಿಂದ ಕಪ್ಪು ಸಮುದ್ರ ಮೂಲಕ ವಿಶ್ವಸಂಸ್ಥೆಯಲ್ಲಿ ಮಧ್ಯಸ್ಥಿಕೆಯಲ್ಲಿ ಈ ರಫ್ತು ಕಾರ್ಯ ಮತ್ತೆ ಆರಂಭವಾಗಿದೆ. ಏಪ್ರಿಲ್ ತಿಂಗಳಲ್ಲಿ ಯುಕ್ರೇನ್ ಮತ್ತು ರಷ್ಯಾ ನಡುವಣ ಯುದ್ಧದ ಪರಿಣಾಮ ಈ ಎಣ್ಣೆಯ ಬೆಲೆ ದಾಖಲೆಮಟ್ಟಕ್ಕೇರಿತ್ತು. ಉಕ್ರೇನ್‌ನ ಹೊರೈಕೆದಾರರು ಆದಷ್ಟು ಬೇಗನೆ ಸೂರ್ಯಕಾಂತಿ ಎಣ್ಣೆ ಪೂರೈಕೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಕಳೆದ ಋತುವಿನ ಅಪಾರ ಪ್ರಮಾಣದ ಸೂರ್ಯಕಾಂತಿ ಬೀಜಗಳನ್ನೇ ಇನ್ನೂ ಪುಡಿ ಮಾಡಿಲ್ಲ ಎಂದು ಮುಂಬೈಯ ವ್ಯವಹಾರ ಸಂಸ್ಥೆ ತಿಳಿಸಿದೆ.

29.09.2022
Samyuktha Kar. p.05

facebook.com/vijaykarnataka
twitter.com/vijaykarnataka
ರಾಜ್ಯ | STATE
www.vijaykarnataka.com
www.apps.vijaykarnataka.com
ವಿಜಯ ಕರ್ನಾಟಕ VK

ವಿಕ ಕರುನಾಡ ಹೈನು ಹೊನ್ನು ಸಮ್ಮೇಳನದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಘೋಷಣೆ

ಹೈನುಗಾರರ ಕಲ್ಯಾಣಕ್ಕಾಗಿ ದೊಡ್ಡ ಹೋರಾಟ

■ ವಿಕ ಸುದ್ದಿಲೋಕ ಚನ್ನಪಟ್ಟಣ(ರಾಮನಗರ)

"ನಾಡಿನ ಹಾಲು ಉತ್ಪಾದಕರು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳ ಸಮಸ್ಯೆಯನ್ನು ಪರಿಹರಿಸಲು ದೊಡ್ಡ ಹೋರಾಟ ರೂಪಿಸುತ್ತೇನೆ," ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಘೋಷಿಸಿದರು.

ಚನ್ನಪಟ್ಟಣದ ಡಾ.ಅಂಬೇಡ್ಕರ್ ಭವನದಲ್ಲಿ ವಿಜಯ ಕರ್ನಾಟಕವು ಬಮೂಲ್ ಸಹಯೋಗದೊಂದಿಗೆ ಬುಧವಾರ 'ಹೈನು ಹೊನ್ನು ಕ್ಷೀರಪಥ ಜೀವನ ರಥ' ಜಿಲ್ಲಾ ಹೈನುಗಾರರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, "ನೆರೆಯ ತೆಲಂಗಾಣದಲ್ಲಿ ಹಾಲು ಉತ್ಪಾದಕರ ಸಂಘಗಳು ರೈತರಿಗೆ ಆರ್ಥಿಕ ನೆರವು ನೀಡುವಷ್ಟು ಸಬಲವಾಗಿವೆ. ಅದರ ನಮ್ಮ ರಾಜ್ಯದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳ ಹಸ್ತಕ್ಷೇಪ, ಕಿರಿಕಿರಿಯಿಂದಾಗಿ ಸಂಘಗಳು ಸಂಕಷ್ಟಕ್ಕೆ ಸಿಲುಕಿವೆ. ಇದಕ್ಕೆ ಕಡಿವಾಣ ಹಾಕುವ ಕೆಲಸವನ್ನು ನಾನು ಮಾಡುತ್ತೇನೆ," ಎಂದು ಹೇಳಿದರು.

ಸಂದಿನಿ ಬ್ರಾಂಡ್ ವಿಸ್ತಾರವಾಗಲಿ

"ಇಂದು ಖಾಸಗಿ ಹಾಲು ಮಾರಾಟ ಕಂಪನಿಗಳು ಸಾಕಷ್ಟು ಲಾಭದಲ್ಲಿವೆ. ಆದರೆ, ಸರಕಾರ ಒತ್ತಾಸೆಯಾಗಿ ನಿಂತರೂ ಒಕ್ಕೂಟಗಳು ಇನ್ನೂ ಸಂಕಷ್ಟದಲ್ಲಿವೆ ಎಂದರೆ ಪರಾಮರ್ಶೆ ನಡೆಸಬೇಕಿದೆ. ಖಾಸಗಿಯವರಿಗೆ ಸರಿಸಮಾನವಾಗಿ ಹಾಲಿನ ಉತ್ಪನ್ನಗಳನ್ನು ತಯಾರಿಸಿ ನಂದಿನಿ ಬ್ರಾಂಡ್ ಅನ್ನು ವಿಸ್ತರಿಸುವ ಕೆಲಸವಾಗಬೇಕಿದೆ. ಇದಕ್ಕಾಗಿ ಹಾಲು ಒಕ್ಕೂಟ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು," ಎಂದು ಎಚ್‌ಡಿಕೆ ಸಲಹೆ ನೀಡಿದರು.

ರೈತರ ಕ್ರಮಕ್ಕೆ ಸ್ಥಾಯಿಸಿಗುತ್ತಿಲ್ಲ

ಕ್ರಮದಲ್ಲಿ ಮಾತನಾಡಿದ ಮಾಗಡಿ ಶಾಸಕ ಎ. ಮಂಜುನಾಥ್, "ಗುಜರಾತ್‌ನಲ್ಲಿ 6 ತಿಂಗಳಿಗೊಮ್ಮೆ ಹಾಲಿನ ದರವನ್ನು ಹೆಚ್ಚಿಸಲಾಗುತ್ತದೆ. ನಮ್ಮ ನೆರೆಯ ರಾಜ್ಯಗಳಲ್ಲಿ ಪ್ರತಿ ಲೀಟರ್‌ಹಾಲಿಗೆ 40 ರಿಂದ 55 ರೂ. ಬೆಲೆ ನೀಡಲಾಗುತ್ತಿದೆ. ನಮ್ಮ ರಾಜ್ಯ ಹಾಸನ ಒಕ್ಕೂಟ ರೈತರಿಗೆ 30 ರೂ. ನೀಡುತ್ತಿದ್ದು, ಬಮೂಲ್ 27 ರೂ. ನೀಡುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದೆ," ಎಂದು ಬೇಸರ ವ್ಯಕ್ತಪಡಿಸಿದರು.

ಹೆಚ್ಚಳ

ರ್ಯಕ್ರಮದಲ್ಲಿ ಮಾತನಾಡಿದ ಬಮೂಲ್ ಅಧ್ಯಕ್ಷ ಮಂಹಮೂರ್ತಿ, "ಕರೋನಾ ಸಮಯದಲ್ಲಿ ಹಾಲು ಪ್ರತಿಕ್ಕೆ 3 ಕೋಟಿ ರೂ. ನಷ್ಟವಾದರೂ, ರೈತರಿಗೆ ಸಮಯಾಗದಂತೆ ನೋಡಿಕೊಂಡಿದ್ದೇವೆ. ಮುಂದಿನ ಲೀಟರ್‌ಗೆ 3 ರೂ. ಹೆಚ್ಚಳವಾಗಲಿದ್ದು, ಈ ಮೂಲಕ ರೈತರಿಗೆ ನೀಡಲಾಗುವುದು," ಎಂದರು.

ಗಳೂರು ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಂತ್, ತಾಲೂಕು ಹಾಲು ಉತ್ಪಾದಕರ ಸಹಕಾರ ಗಳ ನೌಕರರ ಸಂಘದ ಅಧ್ಯಕ್ಷ ಪುಟ್ಟೇಗೌಡ, ವಿಜಯ ಕರ್ನಾಟಕ ಬೆಂಗಳೂರು ಗ್ರಾಮಾಂತರ ಸ್ಥಾನಿಕ ಸಂಪಾದಕ ಸೀತಾರಾಮ ಮಯ್ಯ ಉಪಸ್ಥಿತರಿದ್ದರು. ಜಿಲ್ಲೆಯ 5 ಹಾಲು ಉತ್ಪಾದಕ ಸಹಕಾರ ಸಂಘಗಳು ಮತ್ತು 5 ವೈಯಕ್ತಿಕ ವಿಭಾಗದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಹೈನುಸಿರಿ ಪ್ರಶಸ್ತಿಯನ್ನು ಪತ್ರಿಕೆಯ ವತಿಯಿಂದ ನೀಡಲಾಯಿತು.



ಚನ್ನಪಟ್ಟಣದಲ್ಲಿ ನಡೆದ ಹೈನು ಹೊನ್ನು ಕಾರ್ಯಕ್ರಮದಲ್ಲಿ ಹೈನೋದ್ಯಮದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ, ಬಮೂಲ್ ಅಧ್ಯಕ್ಷ ನರಸಿಂಹ ಮೂರ್ತಿ, ಮಾಗಡಿ ಶಾಸಕ ಎ. ಮಂಜುನಾಥ್ ಅವರು ಹೈನುಸಿರಿ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ವಿಜಯ ಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ, ಬೆಂಗಳೂರು ಹಾಲು ಒಕ್ಕೂಟದ ವ್ಯವಸ್ಥಾಪಕ ಹೇಮಂತ್, ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಸಂಘದ ಅಧ್ಯಕ್ಷ ಪುಟ್ಟೇಗೌಡ ಉಪಸ್ಥಿತರಿದ್ದರು.

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಹೈನು ಹೊನ್ನು ಕಾರ್ಯಕ್ರಮ ನಡೆಯುತ್ತಿದೆ. ಸೂಪರ್‌ಸ್ಟಾರ್ ರೈತ ಕಾರ್ಯಕ್ರಮದ ಮೂಲಕ ನಾಡಿನ ರೈತರನ್ನು ಪ್ರೋತ್ಸಾಹಿಸುವ ಕೆಲಸ ಮಾಡಿದ್ದ ವಿಜಯ ಕರ್ನಾಟಕ ಈಗ ಹೈನು ಹೊನ್ನು ಕಾರ್ಯಕ್ರಮದ ಮೂಲಕ ಹಾಲು ಉತ್ಪಾದಕರನ್ನು ಉತ್ತೇಜಿಸುವ ಕೆಲಸ ಮಾಡುತ್ತಿದೆ. ರೈತರು, ಜನರ ಧ್ವನಿಯಾಗಿ ವಿಜಯ ಕರ್ನಾಟಕ ಕೆಲಸ ಮಾಡಲಿದೆ.

ಸುದರ್ಶನ ಚನ್ನಂಗಿಹಳ್ಳಿ
ಸಂಪಾದಕ,
ವಿಜಯ ಕರ್ನಾಟಕ

ಹೈನು-ಹೊನ್ನು

ವಿಕ ಕಾರ್ಯಕ್ಕೆ ಗಣ್ಯರ ಮೆಚ್ಚುಗೆ

ರೈತರ ಪರವಾಗಿ ನಿಂತು, ಕೃಷಿಕರಿಗೆ ಪ್ರೋತ್ಸಾಹ ನೀಡುತ್ತಿರುವ ವಿಜಯಕರ್ನಾಟಕ ಪತ್ರಿಕೆಯ ಕೆಲಸ ಪ್ರಶಂಸಾರ್ಹವಾಗಿದ್ದು, ಹೈನುಹೊನ್ನು ಕಾರ್ಯಕ್ರಮದ ಮೂಲಕ ಹಾಲು ಉತ್ಪಾದಕರ ನೋವು ನಲಿವಿಗೆ ದನಿಯಾಗುತ್ತಿರುವ ಪತ್ರಿಕೆಯ ಕೆಲಸವನ್ನು ಅನ್ಯಾಯಕ್ಕೆ ಪರವಾಗಿ ಅಭಿನಂದಿಸುತ್ತೇನೆ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹೈನು ಹೊನ್ನು ಅಭಿಯಾನದ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಮಾಗಡಿ ಶಾಸಕ ಎ.ಮಂಜುನಾಥ್, "ನಾಡಿನ ಉದ್ದಗಲಕ್ಕೂ ರೈತರ ಬಗ್ಗೆ ವಿಶೇಷ ಕಾಳಜಿಯನ್ನಿಟ್ಟು ಕೊಂಡು ವಿಭಿನ್ನ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗುವ ಮೂಲಕ ವಿಜಯ ಕರ್ನಾಟಕ, ಹೈನೋದ್ಯಮದಲ್ಲಿ ಪ್ರಗತಿ ಸಾಧಿಸಿದ ರೈತರನ್ನು ಗುರುತಿಸಿ ಸನ್ಮಾನಿಸುತ್ತಿರುವ ಈ ಕಾರ್ಯ ಶ್ಲಾಘನೀಯ," ಎಂದು ಮೆಚ್ಚುಗೆ ಸೂಚಿಸಿದರು.

ಬಮೂಲ್ ಅಧ್ಯಕ್ಷ ನರಸಿಂಹ ಮೂರ್ತಿ ಸಹ ಹೈನೋದ್ಯಮಕ್ಕೆ ವಿಕ ಒತ್ತಾಸೆಯಾಗಿ ನಿಲ್ಲುತ್ತಿರುವುದು ನಮಗೆ ಮತ್ತಷ್ಟು ಉತ್ತೇಜನ ನೀಡಿದಂತಾಗಿದೆ ಎಂದು ಅಭಿಪ್ರಾಯಪಟ್ಟರು.

ದಿಲ್ಲಿ, ಮುಂಬಯಿ, ಕೇರಳದಲ್ಲಿ ಭರ್ಜರಿ ಡಿಮ್ಯಾಂಡ್ | ದಾವಣಗೆರೆಯಲ್ಲಿ ಹೈನುಗಾರರ ಸಮ್ಮೇಳನ

ಶಿಮುಲ್ ಹಾಲಿಗೆ ಹೊರ ರಾಜ್ಯಗಳಲ್ಲಿ ಬೇಡಿಕೆ

■ ವಿಕ ಸುದ್ದಿಲೋಕ ದಾವಣಗೆರೆ

ಶಿಮುಲ್ ಹಾಲಿಗೆ ಹೊರ ರಾಜ್ಯಗಳಲ್ಲಿ ಭಾರಿ ಬೇಡಿಕೆ ಇದೆ ಎಂದು ಶಿಮುಲ್ ಅಧ್ಯಕ್ಷ ಎನ್.ಎಚ್. ಶ್ರೀಪಾದರಾವ್ ಹೇಳಿದರು.

ಶಿವಮೊಗ್ಗ-ದಾವಣಗೆರೆ-ಚಿತ್ರದುರ್ಗ ಹಾಲು ಒಕ್ಕೂಟ ಸಹಯೋಗದಲ್ಲಿ ವಿಜಯ ಕರ್ನಾಟಕ ದಾವಣಗೆರೆಯಲ್ಲಿ ಬುಧವಾರ ಆಯೋಜಿಸಿದ್ದ 'ಹೈನು ಹೊನ್ನು ಕ್ಷೀರಪಥ ಜೀವನ ರಥ' ದಾವಣಗೆರೆ ಜಿಲ್ಲಾ ಹೈನುಗಾರರ ಸಮ್ಮೇಳನದಲ್ಲಿ ಮಾದರಿ ಹಾಲು ಉತ್ಪಾದಕರು ಮತ್ತು ಉತ್ಪಾದಕ ಸಂಘಗಳನ್ನು ಸನ್ಮಾನಿಸಿ ಮಾತನಾಡಿದರು. "ದಿಲ್ಲಿ ಮತ್ತು ಮುಂಬಯಿಗಳಿಂದ ಪ್ರತಿ ದಿನ ತಲಾ ಒಂದು ಲಕ್ಷ ಲೀಟರ್ ಹಾಲಿಗೆ ಬೇಡಿಕೆಯಿದೆ. ಕೇರಳ ರಾಜ್ಯಕ್ಕೆ ಲೀಟರ್‌ಗೆ 42 ರೂ. ನಂತೆ ನಿತ್ಯ 45 ಸಾವಿರ ಲೀಟರ್ ಹಾಲು ಪೂರೈಸುತ್ತಿದ್ದೇವೆ. ನಾವು ಮಾರುಕಟ್ಟೆ ಕಲ್ಪಿಸುತ್ತೇವೆ, ನೀವು ಹಾಲು ಉತ್ಪಾದನೆ ಹೆಚ್ಚು ಮಾಡಿ," ಎಂದು ಅವರು ಹಾಲು ಉತ್ಪಾದಕರಿಗೆ ಕರೆ ನೀಡಿದರು.

"ಕಷ್ಟಗಳ ನಡುವೆ ಹಾಲು ಉತ್ಪಾದಿಸುವ ಉತ್ಪಾದಕರಿಗೆ ನ್ಯಾಯಯುತ ಬೆಲೆ ಕೊಡಲು ಒಕ್ಕೂಟಗಳಿಗೆ ಸಾಧ್ಯವಾಗುತ್ತಿಲ್ಲ. ಲೀಟರ್‌ಗೆ 3 ರೂ. ಹೆಚ್ಚಳ ಮಾಡುವಂತೆ ಕೆಎಂಎಫ್ ಸಲ್ಲಿಸಿರುವ ಪ್ರಸ್ತಾವಕ್ಕೆ ಸರಕಾರ ಅನುಮತಿ ನೀಡಬೇಕು," ಎಂದು ಅವರು ಆಗ್ರಹಿಸಿದರು.

ಕೆಎಂಎಫ್ ನಿರ್ದೇಶಕ ಸಿ. ವೀರಭದ್ರಬಾಬು ಮಾತನಾಡಿ, "ರಾಜ್ಯದಲ್ಲಿ ಪ್ರಸ್ತುತ ನಿತ್ಯ 80 ಲಕ್ಷ ಲೀ. ಹಾಲು ಉತ್ಪಾದನೆ ಆಗುತ್ತಿದ್ದು ಅದು ಒಂದು ಕೋಟಿ ಲೀಟರ್‌ಗೆ ಹೆಚ್ಚಬೇಕು. ಹಾಲು ಉತ್ಪಾದನೆ ಹೆಚ್ಚಳ ಮಾಡಲು ಕೆಎಂಎಫ್‌ನಿಂದ ನಂದಿನಿ ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪಿಸಲು ಆರ್‌ಬಿಐ ಅನುಮತಿಗೆ ಪತ್ರ ಬರೆಯಲಾಗಿದೆ," ಎಂದು ತಿಳಿಸಿದರು.

ಶಿಮುಲ್ ಎಂಡಿ ಬಸವರಾಜಪ್ಪ, ನಿರ್ದೇಶಕರಾದ ಬಿ.ಜಿ. ಬಸವರಾಜಪ್ಪ, ಕೆ.ಎನ್. ಸೋಮಶೇಖರಪ್ಪ, ಎನ್.ಡಿ. ಹರೀಶ್, ವಿಕ್ರಮ್ ಪಾಟೀಲ್, ಜಿ.ಪಿ.ಯಶವಂತರಾಜು, ವಿಕ್ರಮ್ ಪಾಟೀಲ್, ತಾರಾನಾಥ, ಎಚ್.ಬಿ. ದಿನೇಶ್, ವಿಜಯ ಕರ್ನಾಟಕ ದಾವಣಗೆರೆ ಆವೃತ್ತಿ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ ಉಪಸ್ಥಿತರಿದ್ದರು. ದಾವಣಗೆರೆ ಭಾಗದ ನಿರ್ದೇಶಕ ಜಗದೀಶಪ್ಪ ಬಣಕಾರ್ ಅಧ್ಯಕ್ಷತೆ ವಹಿಸಿದ್ದರು. ದಾವಣಗೆರೆ ಡೇರಿ ವ್ಯವಸ್ಥಾಪಕ ಡಾ. ಗುರುಶೇಖರ್ ನಿರೂಪಿಸಿದರು.



ದಾವಣಗೆರೆಯಲ್ಲಿ ವಿಜಯ ಕರ್ನಾಟಕ, ಶಿಮುಲ್ ಸಹಯೋಗದಲ್ಲಿ ಬುಧವಾರ ನಡೆದ ಹೈನು-ಹೊನ್ನು ಕಾರ್ಯಕ್ರಮದಲ್ಲಿ 12 ಜನ ರೈತರಿಗೆ 'ಅತ್ಯುತ್ತಮ ಹೈನೋದ್ಯಮಿ' ಹಾಗೂ 6 ಸಂಘಗಳಿಗೆ 'ಅತ್ಯುತ್ತಮ ಸಹಕಾರ ಸಂಘ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಷ್ಟತಪ್ಪಿಸಿದ ಯಡಿಯೂರಪ್ಪ, ಎಂ.ಪಿ. ರಾಘವೇಂದ್ರ

"ಶಿಮುಲ್ ನಷ್ಟದಲ್ಲಿತ್ತು, ತುಮಕೂರಿನಲ್ಲಿ ಶುರುವಾದ ಹೊಸ ಡೇರಿಯಲ್ಲಿ ನಮ್ಮ ಶಿಮುಲ್ ಹಾಲನ್ನು ಹಾಲಿನ ಪುಡಿ ಮಾಡಿ ಕೊಡಲು ವ್ಯವಸ್ಥೆ ಮಾಡುವ ಮೂಲಕ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಸಂಸದ ರಾಘವೇಂದ್ರ ನಮಗೆ ಆಗುತ್ತಿದ್ದ ನಷ್ಟ ತಪ್ಪಿಸಿದರು," ಎಂದು ಅಧ್ಯಕ್ಷ ಎನ್.ಎಚ್. ಶ್ರೀಪಾದರಾವ್ ಸ್ಮರಿಸಿಕೊಂಡು

29.09.2022
Viajaya Kar. p.04

29.09.2022
Prajavani p.3A

9 ಹೊಸ ತಳಿಗಳ ಆವಿಷ್ಕರಿಸಿದ ಕೃಷಿ ವಿವಿ, ರೈತರ ಸಮಸ್ಯೆಗಳಿಗೆ ಪರಿಹಾರ

ಭತ್ತದ ಈ ತಳಿಗೆ ಬಾರದು ಬೆಂಕಿರೋಗ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಕಿರೋಗ ನಿಗ್ರಹಿಸುವ ಸಾಮರ್ಥ್ಯ, ಅಲ್ಪಾವಧಿಯಲ್ಲೇ ಕಟಾವು, ಅಧಿಕ ಇಳುವರಿ ನೀಡುವ ಎರಡು ಬಗೆಯ ಭತ್ತದ ತಳಿಗಳನ್ನು ಸಂಶೋಧಿಸಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಅವುಗಳ ಬಿಡುಗಡೆಗೆ ಸಿದ್ಧತೆ ನಡೆಸಿದ್ದಾರೆ.

ನ.3ರಿಂದ 6ರ ತನಕ ನಡೆಯುವ 'ಕೃಷಿ ಮೇಳ'ದಲ್ಲಿ ಈ ಹೊಸ ತಳಿಗಳು ಪ್ರದರ್ಶನವಾಗಲಿವೆ.

ಪ್ರಜಾವಾಣಿ ವಿಶೇಷ

ಪ್ರತಿಕೂಲ ಹವಾಮಾನ, ಅಧಿಕ ವೆಚ್ಚ, ರೋಗಬಾಧೆ ಹಾಗೂ ಕೃಷಿ ಕಾರ್ಮಿಕರ ಕೊರತೆಯಿಂದ ರಾಜ್ಯದಲ್ಲಿ ಭತ್ತ ಬೆಳೆ ಯುವ ರೈತರ ಸಂಖ್ಯೆ ಕಡಿಮೆಯಾಗುತ್ತಿದೆ. ಭತ್ತದ ಬಿತ್ತನೆ ಪ್ರದೇಶವೂ ಕುಸಿಯುತ್ತಿದೆ.



ಭತ್ತದ ಹೊಸ ತಳಿ 'ಕೆಎಂಪಿ– 225'

ಭತ್ತದ ಬೆಳೆಗಾರರನ್ನು ಉತ್ತೇಜಿಸಲು ಹಾಗೂ ಹೆಚ್ಚಿನ ಆದಾಯ ತರುವ ಉದ್ದೇಶದಿಂದ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.

'ಕೆಎಂಪಿ- 225' ಭತ್ತದ ಹೊಸ ತಳಿಯು ಅಲ್ಪಾವಧಿಯಲ್ಲೇ ಕಟಾವಿಗೆ ಬರಲಿದೆ. ಬೇರೆ ತಳಿಗಳ ಭತ್ತದ ಬೆಳೆ ಸಾಮಾನ್ಯವಾಗಿ 160ರಿಂದ 180 ದಿನಗಳಲ್ಲಿ ಕಟಾವಿಗೆ ಬಂದರೆ,

ಈ ವರ್ಷ 12 ಲಕ್ಷ ರೈತರು ಕೃಷಿ ಮೇಳವನ್ನು ವೀಕ್ಷಿಸುವ ನಿರೀಕ್ಷೆಯಿದೆ. ಹೊಸ ತಳಿಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲಾಗುವುದು.
ಕೆ.ನಾರಾಯಣಗೌಡ
ವಿಸ್ತರಣಾ ನಿರ್ದೇಶಕ, ಕೃಷಿ ವಿ.ವಿ

ಹೊಸ ತಳಿಯ ಫಸಲನ್ನು 120ರಿಂದ 125 ದಿನಕ್ಕೇ ಕಟಾವು ಮಾಡಬಹುದು' ಎಂದು ತಿಳಿಸಿದ್ದಾರೆ.

'ಈ ತಳಿಯನ್ನು ರಾಜ್ಯದ ದಕ್ಷಿಣ ವಲಯದಲ್ಲಿ ಜುಲೈನಲ್ಲಿ ಬಿತ್ತನೆ ಮಾಡಬಹುದು. 'ಐಆರ್ 64' ತಳಿ ಸಾಮಾನ್ಯವಾಗಿ ಬೆಂಕಿರೋಗಕ್ಕೆ ತುತ್ತಾಗಿ ನಷ್ಟವಾಗುತ್ತಿತ್ತು. ಹೊಸತಳಿಯು 'ಐಆರ್ 64' ಭತ್ತದ ತಳಿಗೆ ಹೋಲಿಕೆಯಾದರೂ ಎಲೆ, ತೆನೆದಂಟು ಬೆಂಕಿ ರೋಗ ನಿಗ್ರಹ ಸಾಮರ್ಥ್ಯ ಹೊಂದಿದೆ. ಜತೆಗೆ, ಎಕರೆಗೆ 26 ಕ್ವಿಂಟಲ್ ಇಳುವರಿ ಬರಲಿದೆ' ಎಂದು ಕೃಷಿ ವಿವಿಯ ಪ್ರಾಧ್ಯಾಪಕ ಕೆ.ಶಿವರಾಮ ಹೇಳುತ್ತಾರೆ.

'ಆರ್‌ಎನ್‌ಆರ್ 15048' ವೈಜ್ಞಾನಿಕ ಹೆಸರಿನ ಮತ್ತೊಂದು ಭತ್ತದ ಹೊಸ ತಳಿಯೂ ಅಲ್ಪಾವಧಿಯಲ್ಲೇ ಕೊಯ್ಲಿಗೆ ಬರಲಿದೆ. 125 ದಿನಗಳಲ್ಲಿ ಕಟಾವು ಮಾಡಬಹುದು. ಒಣ ವಲಯದಲ್ಲಿ ಬಿತ್ತನೆಗೆ ಇದು ಹೆಚ್ಚು ಸೂಕ್ತ. ಅಕ್ಕಿಯ ಗಾತ್ರ ತುಂಬ ಸಣ್ಣದಾಗಿರುತ್ತದೆ. ಉತ್ಕೃಷ್ಟದರ್ಜೆಯ ಭತ್ತವಾಗಿದ್ದು ಪ್ರತಿ ಎಕರೆಗೆ 22ರಿಂದ 24 ಕ್ವಿಂಟಲ್ ಇಳುವರಿ ಬರಲಿದೆ' ಎಂದು ತಿಳಿಸಿದ್ದಾರೆ.

ವಿಜ್ಞಾನಿಗಳು ಸಂಶೋಧಿಸಿರುವ ಮುಸುಕಿನ ಜೋಳ ಎಂಎಎಚ್ 14-138 ಸಹ ಕೃಷಿ ಮೇಳದಲ್ಲಿ ಗಮನ ಸೆಳೆಯಲಿದೆ.

ಇದು ಎಲೆ ಅಂಗಮಾರಿ, ಕೇದಿಗೆ ರೋಗನಿರೋಧಕ ಸಾಮರ್ಥ್ಯವನ್ನು ಹೊಂದಿದೆ. ಕಟಾವು ಹಂತದಲ್ಲೂ ಹಸಿರಾಗಿರಲಿದೆ. ಹೆಕ್ಟೇರ್‌ಗೆ 85 ರಿಂದ 95 ಕ್ವಿಂಟಲ್ ಇಳುವರಿ ದೊರೆಯಲಿದೆ.

Bengaluru